**OS. 10-2019 P.W-1**

ದಿನಾಂಕ: 18-01-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ.ಎಸ್ ಎನ್ ಎಲ್ ವಕೀಲರಿಂದ ಪ್ರತಿವಾದಿಯರ ಪರವಾಗಿ.**

ನಾನು 30 ವರ್ಷಗಳಿಂದ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಈಗ ಶಂಭುಗನಹಳ್ಳಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದೇನೆ. 2 ನೇ ವಾದಿ ಆಲೂರಿನ ನ್ಯಾಯಾಲಯದಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. 3 ನೇ ವಾದಿ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. 4 ನೇ ವಾದಿ ಕಮಲಮ್ಮ ನನ್ನ ಅಕ್ಕ. 5 ನೇ ವಾದಿ 4 ನೇ ವಾದಿಯ ಮಗ. 6 ರಿಂದ 8 ನೇ ವಾದಿಯರು 4 ನೇ ವಾದಿಯ ಮಕ್ಕಳು. 1 ನೇ ಪ್ರತಿವಾದಿ ನನ್ನ ಅತ್ತಿಗೆ. ಪುಟ್ಟಮ್ಮ, ನೀಲಮ್ಮ ಮತ್ತು ರಂಗಪ್ಪ , ಇವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾವು ವಾದಿಯರು ಮತ್ತು ಪ್ರತಿವಾದಿ ಸಂ. 1 ರಿಂದ 3 ಮೃತ ನಿಂಗಯ್ಯನವರ ವಾರಸುದಾರರು ಎಂದು ತೋರಿಸಲು ತಾಲ್ಲೂಕು ಕಛೇರಿಯಿಂದ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನಾನು ಪಿ ಯು ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ಮದುವೆಯು 1986 ನೇ ಸಾಲಿನಲ್ಲಿ ಆಗಿರುತ್ತದೆ. ದಾವಾ ಆಸ್ತಿಯು ನಿಂಗಯ್ಯನವರಿಗೆ ಮಂಜೂರಾಗಿತ್ತು ಎಂದು ತೋರಿಸಲು ಸಾಗುವಳಿ ಚೀಟಿಯನ್ನು ನಾವು ಹಾಜರುಪಡಿಸಿರುತ್ತೇವೆ. ನಾನು ಹೇಳುವಂತಹ ಯಾವುದೇ ಸಾಗುವಳಿ ಚೀಟಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ದಾವಾ ಆಸ್ತಿಯು ಯಾವಾಗ ಮಾರಟವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಂಗಯ್ಯನವರಿಗೆ ದಾವಾ ಆಸ್ತಿ ಹೊರತು ಪಡಿಸಿ ಬೇರೆ ಆಸ್ತಿ ಇರಲಿಲ್ಲ. ನಾನು ತವರು ಮನೆಗೆ ಹೋಗಿ ಬರುತ್ತಿದ್ದೆ. ನೀಲಮ್ಮ ನಿಂಗಯ್ಯನವರ ಪತ್ನಿ. ಸದರಿ ಸ. ನಂ. 158 ರಲ್ಲಿ 3 ಎಕರೆ 17 ಗುಂಟೆ ಜಮೀನು ಇದ್ದು, ಅದರ ಖಾತೆ ನೀಲಮ್ಮನವರ ಹೆಸರಿನಲ್ಲಿ ಇದ್ದು ಅದನ್ನು ನೀಲಮ್ಮ ಮತ್ತು ಆಕೆಯ ಸೊಸೆ ಪುಟ್ಟಮ್ಮ ನಿಪಿ 5 ರಂತೆ ದಿಃ 27.01.2007 ರಂದು ಮಾರಾಟ ಮಾಡಿದ್ದರು. ಸದರಿ ಕ್ರಯಪತ್ರದಲ್ಲಿ ಬರೆದಿರುವಂತೆ ಕ್ರಯದ ಪ್ರತಿಫಲವು ನೀಲಮ್ಮನವರ ಕಾವೇರಿ ಗ್ರಾಮೀಣ ಬ್ಯಾಂಕಿನ ಖಾತೆಗೆ ಜಮಾ ಅಗಿರುತ್ತದೆ ಎಂದರೆ ಗೊತ್ತಿಲ್ಲ.

4 ನೇ ಪ್ರತಿವಾದಿಯು ಸದರಿ ಸ್ವತ್ತನ್ನು ಸಾರ್ವಜನಿಕ ಉದ್ದೇಶಕ್ಕಾಗಿ 2007 ರಲ್ಲಿ ನಿಪಿ 5 ಕ್ರಯಪತ್ರದ ಪ್ರಕಾರ ಖರೀದಿಸಿದ್ದರು ಎಂದರೆ ಆ ಬಗ್ಗೆ ಗೊತ್ತಿಲ್ಲ. ಪುರಸಭೆಯವರು ಸದರಿ ಸ್ವತ್ತಿನ ಬಾಬ್ತು ಆಗಿನ ಮಾರುಕಟ್ಟೆಯ ಮೌಲ್ಯಕ್ಕಿಂತ ಹೆಚ್ಚಿನ ಬೆಲೆಯನ್ನು ನೀಲಮ್ಮ ಮತ್ತು ಪುಟ್ಟಮ್ಮನವರಿಗೆ ನೀಡಿ ಸದರಿ ಸ್ವತ್ತನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

3. ಈ ರೀತಿ ಕ್ರಯಕ್ಕೆ ಪಡೆದ ನಂತರ ಪುರಸಭೆಯವರು ಸದರಿ ಸ್ವತ್ತಿನಲ್ಲಿ 130 ಸೈಟುಗಳನ್ನು ಮಾಡಿ ಅದನ್ನು ನಿವೇಶನ ರಹಿತರಿಗೆ ಹಂಚಲು ಸಿದ್ದತೆ ಮಾಡಿಕೊಳ್ಳುತ್ತಿದ್ದಾಗ ನಾವು ಈ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪುರಸಭೆಯವರು ಪುಟ್ಟಮ್ಮನವರಿಗೆ ಮತ್ತು ನೀಲಮ್ಮನವರಿಗೆ , ಸದರಿ ಸ್ವತ್ತಿನ ಬಾಬ್ತು ಅಂದಿನ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ನೀಡಿ ಸದರಿ ಸ್ವತ್ತನ್ನು ಖರೀದಿಸಿ ಅದರ ಸಂಪೂರ್ಣ ಹಣ ಅವರಿಬ್ಬರಿಗೆ ಸಂದಾಯವಾಗಿದ್ದರೂ , ಸದರಿ ನಿಪಿ 5 ಕ್ರಯಪತ್ರವನ್ನು ಮಾಡಿಕೊಳ್ಳುವಾಗ ಯಾವುದೇ ರೀತಿ ಮೋಸ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ 5 ರಂತೆ ಕ್ರಯ ಪತ್ರ ಆದ ದಿನವೇ ಸದರಿ ಸ್ವತ್ತಿನ ಸ್ವಾಧೀನವನ್ನು ನೀಲಮ್ಮ ಮತ್ತು ಪುಟ್ಟಮ್ಮ ಪುರಸಭೆಯವರಿಗೆ ನೀಡಿರುತ್ತಾರೆ, ಈ ರೀತಿ ಸ್ವಾಧೀನ ಪಡೆದುಕೊಂಡ ನಂತರವೇ, ಪುರಸಭೆಯವರು ನಿವೇಶನಗಳನ್ನು ನಿರ್ಮಿಸಿ ಅದರ ಹಂಚಿಕೆಗೆ ಸಿದ್ದತೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

4. ಪಿಟಿಸಿಯಲ್ ಕಾಯ್ದೆಯ ಪ್ರಕಾರ ಸರ್ಕಾರದ ಅನುಮತಿ ಪಡೆಯದೇ ಕ್ರಯದ ಪ್ರಕ್ರಿಯೆಯನ್ನು ಮಾಡಲಾಗಿದೆ ಎಂದು ಸುಳ್ಳು ಸಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾರ್ವಜನಿಕ ಉದ್ದೇಶಕ್ಕೆಂದು ಪುರಸಬೆಯವರು ಸ್ವತ್ತನ್ನು ಖರೀದಿಸಿರುವುದರಿಂದ ಸದರಿ ಕಾಯ್ದೆಯು ಸರ್ಕಾರಿ ಸಂಸ್ಥೆಗಳು , ಪುರಸಬೆಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಒಂದೇ ಶಾಲೇಯಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದೇನೆ. ನನಗೆ ನನ್ನ ವಿದ್ಯಾರ್ಥಿಗಳ ಬಗ್ಗೆ ಗೊತ್ತಿರುತ್ತದೆ. ಇತರ ವಾದಿಯರು ಕೂಡ ಕೆಲಸ ಮಾಡುತ್ತಿರುವುದರಿಂದ ಅವರಿಗೆಲ್ಲರಿಗೂ ಪ್ರಾಪಂಚಿಕ ಜ್ಞಾನ ಇರುತ್ತದೆ. ನಾನು ನಮಗೆ ಇರುವ ಆಸ್ತಿ ಎಲ್ಲಿ ಇರುತ್ತದೆ ಎಂಬ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ , ಪುರಸಬೆಯವರಿಗೆ ಮತ್ತು ಸರ್ಕಾರಕ್ಕೆ ತೊಂದರೆ ನೀಡಬೇಕೆಂಬ ದೃಷ್ಟಿಯಿಂದ ಸುಳ್ಳು ದಾವೆ

ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾವು ನಿಂಗಯ್ಯ ಮುತ್ತ ನೀಲಮ್ಮರವರ ವಾರಸುದಾರರೇ ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿದಾರರ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬೇಲೂರು.